S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

**ಸ್ಪೆಷಲ್ ಕೇಸ್ ನಂಬರ್ಃ 167/2020**

**ಚಾ.ಸಾ.–04 ಪ್ರಾ.ಸಾ.–09**

| | |
|---|---|
| **ಸಾಕ್ಷಿದಾರರ ಹೆಸರು** | **ನಿಂಗಯ್ಯ** |
| **ತಂದೆಯ ಹೆಸರು** | **ಸೊಟ್ಟಯ್ಯ** |
| **ವಯಸ್ಸು** | **53 ವರ್ಷಗಳು** |
| **ಉದ್ಯೋಗ** | **ಕೂಲಿ ಕೆಲಸ** |
| **ವಾಸ** | **ಮುಟ್ಟನಹಳ್ಳಿ ಗ್ರಾಮ,** |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 1 , 2 ರವರ ಪರಿಚಯ ಇದೆ. ಅವರು ನಮ್ಮ ಮನೆ ಎದುರುಗಡೆ ಇದ್ದಾರೆ. ಅವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಚಾಸಾ 3 , 5 , 6 ಪರಿಚಯ ಇಲ್ಲ. ಆರೋಪಿತರ ಪರಿಚಯ ಇಲ್ಲ. ಅವರು ಯಾವ ಊರಿನವರು ಹಾಗೂ ಯಾವ ಜಾತಿಯವರು ಎಂದು ಗೊತ್ತಿಲ್ಲ. ಆರೋಪಿತರನ್ನು ಈ ಮೊದಲು ನಾನು ನೋಡಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೇನು ಗೊತ್ತಿಲ್ಲ. ಚಾಸಾ 1 , 2 ಹಾಗೂ ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿದನ್ನು ನಾನು ನೋಡಿಲ್ಲ. ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಅಂದರೆ ಎಂಒ 1 ನೋಡಿಲ್ಲ. ಪೊಲೀಸರಿಗೆ ಘಟನೆಯನ್ನು ನೋಡಿದ್ದೇನೆ ಎಂದು ಹೇಳಿಕೆ ಕೊಟ್ಟಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ. ನಾನು ಹೆಬ್ಬೆಟ್ಟು ಹಾಕುತ್ತೇನೆ. ನಿಪಿ 2 ರಲ್ಲಿ ನಾನು ಯಾವುದೆ ಹೆಬ್ಬೆಟ್ಟು ಹಾಕಿಲ್ಲ. ನಿಪಿ 3 ಭಾವಚಿತ್ರದಲ್ಲಿ ನಾನು ಕಂಡುಬರುತ್ತೇನೆ. ಯಾವ ವಿಚಾರಕ್ಕೆ

ಭಾವಚಿತ್ರ ತೆಗೆದರು ಗೊತ್ತಿಲ್ಲ. ಅದನ್ನು ಚಾಸಾ 1 ರವರ ಮನೆಯಲ್ಲಿ ತೆಗೆಯಲಾಗಿದೆ. ನಿಪಿ 2 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

2) ಗಲಾಟೆಯು ದಿಃ27.8.2019 ರಂದು ರಾತ್ರಿ 11.30 ಸಮಯದಲ್ಲಿ ಚಾಸಾ 1 ಮತ್ತು 2 ರವರ ಜೊತೆ ಜಗಳ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಚಸಾ 1 ರವರ ಬಾಗಿಲನ್ನು ಬಡಿದು ಜಖಂಗೊಳಿಸಿದರು ಎಂದರೆ ಸರಿಯಲ್ಲ. ಪಾತ್ರೆಗಳನ್ನು ಇನ್ನಿತರ ವಸ್ತುಗಳನ್ನು ಚಲ್ಲಾಪಿಲ್ಲಿ ಮಾಡಿ ಬಿಸಾಡಿದರು ಎಂದರೆ ಸರಿಯಲ್ಲ. ಅವಾಚ್ಯ ಶಬ್ದಗಳಿಂದ ಬೈದು ಸುಟ್ಟು ಹಾಕುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಮಾದಿಗ ಸೂಳೆಮಕ್ಕಳೆ ಎಂದು ಬೈದರು ಎಂದರೆ ಸರಿಯಲ್ಲ. ಎಲ್ ಸಿ ಡಿ ಟಿವಿಯನ್ನು ನನ್ನ ಮೇಲೆ ಬಿಸಾಡಿದರು ಎಂದರೆ ಸರಿಯಲ್ಲ. ಚಾಸಾ 9 ರವರಿಗೆ ಸೇರಿದ ಮೋಟಾರು ಸೈಕಲು ಕೆಎ 41 ಇಸಿ 0981 ನ್ನು ಆರೋಪಿ ದೊಣ್ಣೆಯಿಂದ ಹೊಡೆದು ನಷ್ಟ ಮಾಡಿದರು ಎಂದರೆ ಸರಿಯಲ್ಲ. ಈ ಎಲ್ಲ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರಿಗೆ ನಾನು ದಿಃ 30.8.2019 ರಂದು ಈಗ ಓದಿ ಹೇಳಿದಂತೆ ನಾನು ಮೇಲ್ಕಂಡ ವಿಳಾಸದಲ್ಲಿ ---------------ಮತ್ತೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಪಿ.**10 ಎಂದು ಗುರುತಿಸಲಾಯಿತು. ಈ ಬಗ್ಗೆ ದಿಃ 28.8.2019 ರಂದು ಪೊಲೀಸರು ಸ್ಥಳ ಮಹಜರಿಗೆ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ 1 ರವರ ಮನೆಯನ್ನು ಪರಿಶೀಲಿಸಿದರು ಎಂದರೆ ಸರಿಯಲ್ಲ. ವಸ್ತುಗ.ಳು ಚಲ್ಲಾಪಿಲ್ಲಿಯಾಗಿದ್ದು ಮತ್ತು ವಾಹನಕ್ಕೆ ಜಖಂ ಆಗಿದುನ್ನು ಪೊಲೀಸರು ಗಮನಿಸಿದರು ಮತ್ತು ಅದಕ್ಕೆ ಮೌಲ್ಯ ಮಾಡಿದರು ಎಂದರೆ ಸರಿಯಲ್ಲ. ಚಾಸಾ 1 ರವರು ಸ್ಥಳ ತೋರಿಸಿದಾಗ ನಿಪಿ 3 ಭಾವಚಿತ್ರ ತೆಗೆಯಲಾಗಿದೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ  ಆರೋಪಿತರ ಪರ ಶ್ರೀ ಟಿಡಿಎಂ  ವಕೀಲರಿಂದಃ**

3) ಸಹಿಯನ್ನುಹೊರತುಪಡಿಸಿ ನಿಪಿ 2ರ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಘಟನೆಯ ಬಗ್ಗೆ ನನಗೇನು ಗೊತ್ತಿಲ್ಲ ಎಂದರೆ ಸರಿ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ